ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ          ದಿನಾಂಕ : DATE : 26/07/2019

# 14 ಅತೃಪ್ತರ ಬಗ್ಗೆ ಶೀಘ್ರ ನಿರ್ಧಾರ

## 14 ಶಾಸಕರ ಅನರ್ಹತೆ, ರಾಜೀನಾಮೆ ಬಗ್ಗೆ ಶೀಘ್ರ ತೀರ್ಮಾನಿಸುವೆ: ಸ್ಪೀಕರ್

**ಬೆಂಗಳೂರು:** ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷಗಳಿಂದ ಒಟ್ಟು 17 ಮಂದಿ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.



ಈ ಪೈಕಿ ಇಬ್ಬರ ವಿರುದ್ಧ ಕೇವಲ ಅನರ್ಹತೆ ದೂರು ಬಂದಿತ್ತು. ಉಳಿದ 15 ಮಂದಿಯ ವಿರುದ್ಧ ಅನರ್ಹತೆ ದೂರು ಹಾಗೂ ರಾಜೀನಾಮೆ ವಿಚಾರ ಎರಡೂ ಸ್ಪೀಕರ್ ಕೋರ್ಟ್ ಮುಂದಿತ್ತು. ಈ ಪೈಕಿ ಪ್ರಸ್ತುತ ಮೂವರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪೀಕರ್ ರಮೇಶ್ ಕುಮಾರ್ ಹೇಳಿದ್ದಾರೆ.

ಉಳಿದ 14 ಶಾಸಕರ ಬಗ್ಗೆ ಇರುವ ಅನರ್ಹತೆ ದೂರು ಹಾಗೂ ರಾಜೀನಾಮೆ ವಿಚಾರಗಳನ್ನು ಶೀಘ್ರದಲ್ಲೇ ಇತ್ಯರ್ಥ ಮಾಡಿ ಆದೇಶ ಮಾಡಲಾಗುವುದು ಎಂದು ಸ್ಪೀಕರ್ ಹೇಳಿದ್ದಾರೆ. ಇದಕ್ಕೆ ಸಾಕಷ್ಟು ಅಧ್ಯಯನ ಅಗತ್ಯವಿದ್ದು, ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗುತ್ತಿದೆ ಈ ವಿಷಯದಲ್ಲಿ ಆತುರವನ್ನೂ ತೋರುವುದಿಲ್ಲ, ವಿಳಂಬವನ್ನೂ ಮಾಡುವುದಿಲ್ಲ ಎಂದೂ ಸ್ಪೀಕರ್ ರಮೇಶ್ ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.